# ಗಟ್ಟಿಗಿತ್ತಿ ಕಂಗನಾ

'ಬಾಲಿವುಡ್‌ನಲ್ಲಿ ಕೆಲವು ಗೇಟ್‌ಕೀಪರ್‌ಗಳಿದ್ದಾರೆ. ಇವರಿಗೆ ಪ್ರತಿಭಾವಂತರನ್ನು ಕಂಡರೆ ಆಗುವುದಿಲ್ಲ. ಹೊಸಬರು ಯಾರೇ ಬಂದು ಮಿಂಚಿದರೂ ಸಹಿಸಲಾಗುವುದಿಲ್ಲ. ಸುಶಾಂತ್ ಸಿಂಗ್ ಆತ್ಮಹತ್ಯೆ ಮಾಡಿಕೊಂಡಿಲ್ಲ. ಅವನದ್ದು ಯೋಜಿತ ಕೊಲೆ. ಅವನನ್ನು ಮೇಲೆ ಬರದಂತೆ ತುಳಿಯುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳುವಂತೆ ಬಾಲಿವುಡ್‌ನಲ್ಲಿರುವ ದೊಡ್ಡ ಕುಳಗಳು ಪ್ರೇರೇಪಿಸಿದ್ದಾರೆ. ನಾಲ್ಕೈದು ಅತ್ಯುತ್ತಮ ಚಿತ್ರಗಳನ್ನು ಕೊಟ್ಟರೂ ಒಂದು ಪ್ರಶಸ್ತಿಯೂ ಸಿಗಲಿಲ್ಲ. ಬಿಗ್‌ಬಜೆಟ್ ಚಿತ್ರಗಳ ಅವಕಾಶ ಸಿಕ್ಕಿದಾಗ ಅದನ್ನು ತಪ್ಪಿಸಲಾಯಿತು. ಈಗ ಅವರೇ ಸುಶಾಂತ್‌ಗೆ ಮಾನಸಿಕ ಖಿನ್ನತೆ ಇತ್ತು, ಚಿಕಿತ್ಸೆ ತಗೋತಿದ್ದ ಎಂದೆಲ್ಲ ಹೇಳುತ್ತಿದ್ದಾರೆ. ಅವನನ್ನು ಮಾನಸಿಕ ಖಿನ್ನತೆಗೆ ದೂಡಿದವರು ಯಾರು?' ಇದು ಕಂಗನಾ ರನೌತ್ ಖಡಕ್ ಮಾತು. ಸುಶಾಂತ್ ಆತ್ಮಹತ್ಯೆಯ ಬಗ್ಗೆ ಬಾಲಿವುಡ್‌ನ ಯಾವ ಮಹಾತಾರೆಯರೂ ತುಟಿಬಿಚ್ಚದೆ ಕುಳಿತಿದ್ದಾಗ ಧೈರ್ಯವಾಗಿ ಟಿ.ವಿ.ಯಲ್ಲಿ ಬಂದು ವಾಸ್ತವವನ್ನು ಮಾತನಾಡಿದ ದಿಟ್ಟೆ ಕಂಗನಾ.



ಕಂಗನಾಗೆ ಬಾಲಿವುಡ್‌ನಲ್ಲಿ ಜಗಳಗಂಟಿ ಎನ್ನುವ ಇಮೇಜ್ ಸೃಷ್ಟಿಯಾಗಿದೆ. ಅದಕ್ಕೆ ಕಾರಣ ಆಕೆಯ ನೇರಮಾತುಗಳೇ. ಮೇಲ್ನೋಟಕ್ಕೆ ಅತಿಭಾವುಕಿಯಂತೆ ಕಂಡರೂ, ಕಂಡದ್ದನ್ನು ಕಂಡಂತೆ ಹೇಳುವುದರಲ್ಲಿ ಕಂಗನಾ ಯಾವತ್ತೂ ಮುಂದೆ. ಅದರಿಂದ ಆಗುವ ಪರಿಣಾಮಗಳ ಬಗ್ಗೆ ಆಕೆ ಯೋಚಿಸುವುದಿಲ್ಲ.

ಹಿಮಾಚಲ ಪ್ರದೇಶದ ಭಾಂಬ್ಲಾ ಎಂಬ ಪುಟ್ಟ ಪಟ್ಟಣವೊಂದರಲ್ಲಿ ಜನಿಸಿದ ಕಂಗನಾ, ಹೆತ್ತವರಿಗೆ ಇದ್ದುದು ಆಕೆಯನ್ನು ಡಾಕ್ಟರ್ ಮಾಡುವ ಕನಸು. 16ರ ಹರೆಯದಲ್ಲಿ ದೆಹಲಿಗೆ ವಾಸಿಸಲು ಬಂದ ಬಳಿಕ ಆಕೆಗೆ ತನ್ನದೇ ಆದ ವೃತ್ತಿಯೊಂದನ್ನು ಆಯ್ಕೆ ಮಾಡುವ ಆಸೆ ಮೂಡಿತು. ಅದೇ ಸಮಯದಲ್ಲಿ ಮಾಡೆಲಿಂಗ್ ವೃತ್ತಿಗೆ ಪ್ರವೇಶಿಸುವ ಅವಕಾಶ ಸಿಕ್ಕಿತು. ರಂಗಭೂಮಿ ನಿರ್ದೇಶಕ ಅರವಿಂದ್ ಗೌರ್ ಜೊತೆಗೆ ಕೆಲಸ ಮಾಡಿದ್ದು ಆಕೆಯಲ್ಲಿದ್ದ ಅಭಿನಯ ಪ್ರತಿಭೆಯನ್ನು ಬಡಿದೆಬ್ಬಿಸಿತು. 2006ರಲ್ಲಿ ಹಾಗೆ ಬಾಲಿವುಡ್ ಬಾಗಿಲು ತೆರೆದಾಗ ಅಭಿನಯಿಸಿದ್ದು ಗ್ಯಾಂಗ್‌ಸ್ಟರ್ ಚಿತ್ರದಲ್ಲಿ. ಆರಂಭದ ಚಿತ್ರದಲ್ಲೇ ಚೊಚ್ಚಲ ನಟನೆಗಾಗಿ ಫಿಲಂಫೇರ್ ಪ್ರಶಸ್ತಿ ಸಿಕ್ಕಿತು.

ಬಾಲಿವುಡ್‌ಗೆ ಎಂಟ್ರಿ ಕೊಟ್ಟು ಈ 16 ವರ್ಷಗಳಲ್ಲಿ ಕಂಗನಾ ಸವೆಸಿದ ಹಾದಿ ಮತ್ತು ಎದುರಿಸಿದ ಸಂಕಷ್ಟಗಳು ಇನ್ನೊಂದು ಸಿನಿಮಾ ಮಾಡುವಂತೆಯೇ ಇವೆ. ಈಗ ಹಿಂತಿರುಗಿ ನೋಡಿದರೆ, ಅಭಿನಯದ ದಾರಿಯಲ್ಲಿ ಮೂರು ರಾಷ್ಟ್ರಪ್ರಶಸ್ತಿ, ನಾಲ್ಕು ಫಿಲಂಫೇರ್ ಪ್ರಶಸ್ತಿ ಮತ್ತು ಈ ವರ್ಷ ಕೇಂದ್ರ ಸರ್ಕಾರದಿಂದ ಪಡೆದ ಪದ್ಮಶ್ರೀ ಪ್ರಶಸ್ತಿ ಆಕೆಯ ಸಾಧನೆಗೆ ಹಿಡಿದ ಕೈಗನ್ನಡಿ. ಫೋರ್ಬ್ಸ್ 'ಭಾರತದ 100 ಸೆಲೆಬ್ರಿಟಿ'ಗಳ ಪಟ್ಟಿಯಲ್ಲಿ ಆಕೆ ಆರು ಸಲ ಸ್ಥಾನ ಪಡೆದಿದ್ದಾರೆ.

ಇದೆಲ್ಲ ಸುಮ್ಮನೇ ಬಂದದ್ದಲ್ಲ. ಕಂಗನಾ ತನ್ನ ಸ್ವಸಾಮರ್ಥ್ಯವನ್ನು ಹೆಜ್ಜೆಹೆಜ್ಜೆಗೂ ಸಾಬೀತು ಪಡಿಸಿಯೇ ಲಭಿಸಿದ್ದು. 2013ರಲ್ಲಿ ಆಕೆ ದೈನಿಕವೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದು 'ಇಂಡಸ್ಟ್ರಿಯಲ್ಲಿ ನನ್ನನ್ನು ಮಾತನಾಡಿಸಲೂ ಲಾಯಕ್ಕಲ್ಲ ಎಂಬಂತೆ ನೋಡುತ್ತಿದ್ದಾರೆ. ನನಗೆ ಇಂಗ್ಲಿಷ್ ಸರಾಗವಾಗಿ ಮಾತನಾಡಲು ಬರುವುದಿಲ್ಲ. ಅದನ್ನೇ ತಮಾಷೆ ಮಾಡುತ್ತಿದ್ದಾರೆ. ತಿರಸ್ಕೃತಳಾಗುವುದು ಜೀವನದ ಅವಿಭಾಜ್ಯ ಅಂಗವೋ ಎಂಬಂತಾಗಿದೆ.'

ಬಾಲಿವುಡ್‌ನಲ್ಲಿ ಆರಂಭದಲ್ಲಿ ಕಂಗನಾಗೆ ಬೆಂಬಲವಾಗಿ ಆಶ್ರಯ ನೀಡಿದ್ದು ಆದಿತ್ಯ ಪಾಂಚೋಲಿ ಮತ್ತು ಜರೀನಾ ವಹಾಬ್ ಕುಟುಂಬ. ಆದರೆ ಬಳಿಕ ಆದಿತ್ಯ ಜೊತೆಗೆ ಆಕೆಗೆ ಅಫೇರ್ ಇದೆ ಎಂದು ಪ್ರಚಾರ ನಡೆಯಿತು. ನಡುರಸ್ತೆಯಲ್ಲಿ ಆದಿತ್ಯ ಆಕೆಯ ಮೇಲೆ ಹಲ್ಲೆ ನಡೆಸಿದ್ದೂ ಆಯಿತು. ಈ ಇಡೀ ಪ್ರಕರಣವನ್ನು ಜಾಣ್ಮೆಯಿಂದ ಎದುರಿಸಿದ ಕಂಗನಾ, ಆದಿತ್ಯನ ಹಿಡಿತದಿಂದ ಹೊರಬಂದು ಸ್ವತಂತ್ರರಾದರು.

ಕಂಗನಾ ಬದುಕಿನಲ್ಲಿ ಬಳಿಕ ಬಂದ ಗಂಡಸರ ಆಶ್ರಯವೂ ಆಕೆಗೆ ನೆಮ್ಮದಿಯನ್ನೇನೂ ಕೊಟ್ಟಿಲ್ಲ. 'ರಾಝ್: ದಿ ಮಿಸ್ಟರಿ ಕಂಟಿನ್ಯೂಸ್' ಚಿತ್ರದ ಸಹನಟ ಅಧ್ಯಯನ್ ಸುಮನ್ ಜೊತೆಗೆ ಸ್ನೇಹಸಂಬಂಧ ಒಂದು ವರ್ಷ ಮಾತ್ರ ಬಾಳಿಕೆ ಬಂತು. ವೃತ್ತಿಯ ಮೇಲೆ ಕೇಂದ್ರೀಕರಿಸಲೆಂದು ಸುಮನ್ ಆಕೆಯನ್ನು ತ್ಯಜಿಸಿದ. ಬಳಿಕ ಇಂಗ್ಲೆಂಡಿನ ನಿಕೊಲಸ್ ಲಾಫರ್ಟಿ ಎಂಬ ವೈದ್ಯನ ಜೊತೆಗೆ ಲಿವಿಂಗ್ ಟುಗೆದರ್ ಸಂಬಂಧ ಎರಡು ವರ್ಷಗಳಲ್ಲೇ ಮುರಿದುಬಿತ್ತು. ಆ ಹಂತದಲ್ಲೇ ಮದುವೆ ಆಗುವುದಿಲ್ಲ ಎಂಬ ನಿರ್ಧಾರವನ್ನು ಆಕೆ ಪ್ರಕಟಿಸಿದರು. ಅದಾದ ಬಳಿಕ ನಟ ಹೃತಿಕ್ ರೋಶನ್ ಜೊತೆಗಿನ ಸ್ನೇಹ ವಿವಾದಕ್ಕೆ ಈಡಾಗಿ, ಕೋರ್ಟ್ ಮೆಟ್ಟಿಲು ಹತ್ತಿ ಕೊನೆಗೆ ರಾಜಿಯಲ್ಲಿ ಮುಗಿಯಿತು.

ಈ ಯಾವ ಹಂತದಲ್ಲಿಯೂ ಕಂಗನಾ ನೇರಮಾತುಗಳ ಸ್ವಭಾವವನ್ನು ಬಿಟ್ಟುಕೊಡಲಿಲ್ಲ. ಬಾಲಿವುಡ್‌ನಲ್ಲಿರುವ ಸ್ವಜನಪಕ್ಷಪಾತ ಮತ್ತು ಲಿಂಗ ತಾರತಮ್ಯದ ವಿರುದ್ಧ ಸದಾ ಬಹಿರಂಗವಾಗಿಯೇ ಮಾತನಾಡಿದ್ದಾರೆ. 2017ರಲ್ಲಿ ಕರಣ್ ಜೋಹರ್ ವಿರುದ್ಧ ಟಿ.ವಿ. ಶೋನಲ್ಲಿ ಸ್ವಜನಪಕ್ಷಪಾತಕ್ಕೆ ಸಂಬಂಧಿಸಿ ಆಕೆ ಖಡಾಖಡಿ ಸಮರವನ್ನೇ ಸಾರಿದ್ದರು.

ಕಂಗನಾ ಬಹುಮುಖ ಪ್ರತಿಭಾವಂತೆ. ಅಧಿಕೃತವಾಗಿ ಕಥಕ್ ಕಲಿತಿದ್ದಲ್ಲದೆ, ನ್ಯೂಯಾರ್ಕ್ ಸ್ಕೂಲ್‌ನಲ್ಲಿ ಚಿತ್ರಕಥೆ ಬರೆಯುವ ಕೋರ್ಸ್ ಮಾಡಿದ್ದಾರೆ. ಆಕೆಯ ಮೇರು ಅಭಿನಯದ 'ಕ್ವೀನ್' ಚಿತ್ರದಲ್ಲಿ ಸಂಭಾಷಣೆಯ ಸಹಲೇಖಕಿ. ಆಕೆ ನಿರ್ಮಾಪಕಿಯಾಗಿದ್ದ 'ಮಣಿಕರ್ಣಿಕಾ' ಸಿನಿಮಾದಲ್ಲಿ ನಿರ್ದೇಶಕ ಅರ್ಧಕ್ಕೇ ಕೈಕೊಟ್ಟಾಗ ಸ್ವತಃ ನಿರ್ದೇಶನ ಮಾಡಿ ಬಾಕ್ಸ್‌ಆಫೀಸ್‌ನಲ್ಲಿ ಯಶಸ್ಸು ಕಂಡ ಗಟ್ಟಿಗಿತ್ತಿ ಕಂಗನಾ. ಈಗ ಸುಶಾಂತ್ ಆತ್ಮಹತ್ಯೆಯ ಪ್ರಕರಣದಲ್ಲೂ ಈಕೆಯ ನೇರವಂತಿಕೆ ಎದ್ದುಕಂಡಿದೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65